ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲಸಂದ್ರ, ಬೆಂಗಳೂರು

ಸಂ: ಸ.ಅ/ವಾ-183/ವಿ ಆರ್/01/2021-22

ದಿನಾಂಕ 05-04-2021

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಎಂ12(58)ಪಿಆರ್/35/2020-21 ದಿನಾಂಕ :21-04-2020 ರವರ ಆದೇಶದಂತೆ ದಿನಾಂಕ :05-04-2021 ರಂದು ವಾರ್ಡ್ ಸಂಖ್ಯೆ-183 ರ ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

## ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ನರಸಿಂಹಮೂರ್ತಿ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | ಹಾಜರಿ |
| 2 | ಶ್ರೀ ಚೇತನ್ ಎನ್ ಎಸ್ ನಾಯಕ್ | ಸದಸ್ಯ ಕಾರ್ಯದರ್ಶಿ-183 ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಪದ್ಮನಾಭನಗರ ಉಪ ವಿಭಾಗ | ಹಾಜರಿ |
| 3 | ಶ್ರೀ ರಾಜಶೇಖರ್.ಸಿ.ಆರ್ | ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-15 ಉಪ ವಿಭಾಗ. | ಹಾಜರಿ |
| 4 | ಶ್ರೀ ಶ್ರೀಧರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 5 | ಶ್ರೀ ಗಂಗಾಧರಸ್ವಾಮಿ | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಗೈರು ಹಾಜರಿ |
| 6 | ಶ್ರೀ ಕೆ.ವೆಂಕಟೇಶ್ | ಕಂದಾಯ ವಸೂಲಿಗಾರರು, ಬಿ.ಬಿ.ಎಂ.ಪಿ. | ಹಾಜರಿ |
| 7 | ಶ್ರೀಮತಿ ಅನಿತಾ | ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಹಾಜರಿ |
| 8 | ಶ್ರೀ ದಿಲೀಪ್‌ಕುಮಾರ್.ಬಿ.ಸಿ. | ಸಹಾಯಕ ಅಭಿಯಂತರರು, (ತ್ಯಾ.ನೀ.ನಿ.ವಿ.ವ್ಯಾಲಿ) | ಹಾಜರಿ |
| 9 | ಶ್ರೀ ಸುದರ್ಶನ್. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 10 | ಶ್ರೀ ನಯವುಲ್ಲಾ ಷರೀಫ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 11 | ಶ್ರೀ ಮೂರ್ತಿ ಬಿ | ಕೆಲಸ ಪರಿವೀಕ್ಷಕರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿ |
| 12 | ಶ್ರೀಮತಿ ಬಿ.ವಿ.ರೇಖಾ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಯೋಜನೆ (ದಕ್ಷಿಣ) | ಗೈರು ಹಾಜರಿ |
| 13 | ಶ್ರೀ ಉಮೇಶ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಯೋಜನೆ (ವಿದ್ಯುತ್) | ಗೈರುಹಾಜರಿ |
| 14 | ಶ್ರೀ ಕೀರ್ತಿ.ಎ | ಕಿರಿಯ ಅಭಿಯಂತರರು ಎಸ್-9 ಬೆಸ್ಕಾಂ | ಹಾಜರಿ |
| 15 | ಶ್ರೀ ಹರೀಶ್ ಹೆಚ್.ಆರ್ | ಅರಣ್ಯ ಇಲಾಖೆ | ಗೈರು ಹಾಜರಿ |
| 16 | ಶ್ರೀ ಲಕ್ಷ್ಮಣ | ತೋಟಗಾರಿಕೆ ಮೇಸ್ತ್ರೀ | ಹಾಜರಿ |



Scanned by CamScanner

| | | | |
|---|---|---|---|
| 17 | ಶ್ರೀ ಎಸ್ ತಿಮ್ಮರಾಜು | ಎಸ್.ಡಬ್ಲ್ಯೂ.ಎಂ ಮೇಸ್ತ್ರೀ | ಹಾಜರಿ |
| 18 | ಶ್ರೀ ಹರಿನಾಯ್ಡು | ಸಾರ್ವಜನಿಕರು | ಹಾಜರಿ |
| 19 | ಶ್ರೀ ವಿ.ವೆಂಕಟೇಶ್ | ಸಾರ್ವಜನಿಕರು | ಹಾಜರಿ |
| 20 | ಶ್ರೀ ಕೆ.ಶ್ರೀನಿವಾಸರೆಡ್ಡಿ | ಸಾರ್ವಜನಿಕರು | ಹಾಜರಿ |

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗ ಹಾಗೂ ವಾರ್ಡ್ ಸಂಖ್ಯೆ-183 ರವರಾದ ಶ್ರೀ ಚೇತನ್ ಎಸ್ ಎಸ್ ನಾಯಕ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ಅಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ಗೆ ಕೋವಿಡ್-19 ಲಸಿಕೆ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ ರವರೊಂದಿಗೆ ಚರ್ಚಿಸಲು ವಾರ್ಡ್ ಸಮಿತಿ ಸಂಚಾಲಕರಿಗೆ ತಿಳಿಸಿದ್ದು, ಕೋವಿಡ್-19 ಪಾಸಿಟಿವ್ ಕೇಸ್‌ಗಳು ಹೆಚ್ಚಾಗಿ ಬರುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಟೆಸ್ಟ್‌ಗಳನ್ನು ಮಾಡಲು ಮಾನ್ಯ ಆಯುಕ್ತರವರು ಸೂಚಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಯಾವ ರೀತಿ ಕೋವಿಡ್-19 ರ ಲಸಿಕೆಯನ್ನು ಹಂಚಿಕೆ ಮಾಡಲಾಗುವುದು ಎಂಬ ಬಗ್ಗೆ ಮಾಹಿತಿಯನ್ನು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಯವರು ಕೇಳಿದರು ಮೊದಲು ಕೋರನಾ ವಾರಿಯರ್ಸ್ ಹಾಗೂ ಬಿ.ಬಿ.ಎಂ.ಪಿ ಪೌರಕಾರ್ಮಿಕ ಸಿಬ್ಬಂದಿಗಳಿಗೆ ಲಸಿಕೆ ನೀಡಲು ಸೂಚಿಸಲಾಯಿತು ಹಾಗೂ ಸಾರ್ವಜನಿಕರಲ್ಲಿ ಲಸಿಕೆಯನ್ನು ಪಡೆಯಲು ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಸಾರ್ವಜನಿಕ ಪ್ರಮುಖ ಮುಖಂಡ ಮತ್ತು ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರನ್ನು ಕೋರಲಾಯಿತು. ಮುಂದುವರೆದು ಹಾಜರಿದ್ದ ಸಾರ್ವಜನಿಕರಲ್ಲಿ ಎಲ್ಲರೂ ಮುಖಗೌಸ್‌ಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಕೋರಿದರು ಮತ್ತು ಮೊದಲನೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ಸೂಚಿಸಿರುತ್ತಾರೆ.

ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಯಾವುದೇ ಸಮಸ್ಯೆಗಳು ಇಲ್ಲದ ಕಾರಣ, ಇಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು :-

1. ಇಟ್ಟುಮಡು 5ನೇ ಅಡ್ಡರಸ್ತೆಯ ಸ್ಟರ್ಲಿಂಗ್ ಅಪಾರ್ಟ್‌ನಿಂದ ದೊಡ್ಡ ಮಳೆ ನೀರು ಚರಂಡಿವರೆಗೆ ಪೈಪ್‌ಲೈನ್ ಅಳವಡಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ವಾರ್ಡ್ ಸಮಿತಿ ಸಂಚಾಲಕರು ಈಗಾಗಲೇ 14ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನವನ್ನು ನೀಡಲಾಗಿದ್ದು, ಸದರಿ ಅನುದಾನದ ಜಾಬ್‌ಕೋಡ್ ಫ್ರೀಜ್ ಆಗಿರುವ ಕಾರಣದಿಂದ ಡಿ-ಫ್ರೀಜ್ ಮಾಡಲು ಕೋರಿ ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ವಾರ್ಡ್ ಸಂಚಾಲಕರು ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

Scanned by CamScanner

2) ಭುವನೇಶ್ವರಿ ನಗರದ ಮುಖ್ಯರಸ್ತೆಯಲ್ಲಿ ಕಟ್ಟಡಗಳನ್ನು ಹಾಕಿಕೊಂಡಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ಬಹಳ ತೊಂದರೆಯಾಗುತ್ತಿರುವುದಾಗಿ ಶ್ರೀನಿವಾಸ್‌ಶೆಟ್ಟಿ ರವರು ತಿಳಿಸಿದಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾತನಾಡಿ ಕೂಡಲೇ ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗುವಂತೆ ನೋಡಿಕೊಳ್ಳುವುದಾಗಿ ವಾರ್ಡ್ ಸಮಿತಿ ಸಭೆಗೆ ತಿಳಿಸಿದರು

3) ತಿಮ್ಮಯ್ಯನಗರದ ಓಂಶಕ್ತಿ ದೇವಸ್ಥಾನದ ರಸ್ತೆಯಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದಾಗಿ ವಾರ್ಡ್ ಸಮಿತಿ ಸಭೆ ಗಮನಕ್ಕೆ ತಂದಾಗ ವಾರ್ಡ್ ಸಂಚಾಲಕರು ಕೂಡಲೇ ಗುಂಡಿಗಳನ್ನು ಮುಚ್ಚಲು ಕ್ರಮವಹಿಸುವುದಾಗಿ ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

4) ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ವಾರ್ಡ್‌ನ ಪ್ರದೇಶದಲ್ಲಿ ಸೊಳ್ಳೆ ಔಷಧಿಗಳನ್ನು ಸಿಂಪಡಿಸುವಂತೆ ಸಾರ್ವಜನಿಕರು ಕೋರಿದಾಗ ಸಭೆಯಲ್ಲಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಔಷಧಿಯನ್ನು ಸಿಂಪಡಿಸಲು ಕ್ರಮವಹಿಸುವುದಾಗಿ ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

5) ಕಾಕತೀಯನಗರ ಪ್ರದೇಶದಿಂದ 8 ಜನ ಪೌರಕಾರ್ಮಿಕರನ್ನು ಬೇರೆ ಕಡೆ ವರ್ಗಾವಣೆ ಮಾಡಿರುವುದರಿಂದ ಕಸ ಸಂಗ್ರಹಣೆ ಕಷ್ಟಕರವಾಗಿರುವುದರಿಂದ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಯವರಾದ ಸಂತೋಷ್ ಜೊತೆ ನೋಡಲ್ ಅಧಿಕಾರಿಯವರು ದೂರವಾಣಿ ಮುಖಾಂತರ ಮಾತನಾಡಿ ಬೇರೆ ಕಡೆ ನಿಯೋಜಿಸಿರುವ 8 ಜನ ಪೌರಕಾರ್ಮಿಕರನ್ನು ಕೂಡಲೇ ಕಾಕತೀಯನಗರಕ್ಕೆ ನಿಯೋಜಿಸುವಂತೆ ತಿಳಿಸಿ, ವಾರ್ಡ್ ಸಮಿತಿ ಸಭೆ ಗಮನಕ್ಕೆ ತಂದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿ/ವಾರ್ಡ್ ಸಮಿತಿ ಅಧ್ಯಕ್ಷರು.

ವಾರ್ಡ್ ಸಮಿತಿ ಸಂಚಾಲಕರು

Scanned by CamScanner

## ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಅಧಿಕಾರಿಗಳು :-

| ಕ್ರಮ ಸಂಖ್ಯೆ | ಅಧಿಕಾರಿ ಹೆಸರು | ಹುದ್ದೆ | ಸಹಿ |
|---|---|---|---|
| 1. | ಅನಿತ. ಆರ್. | ಕಿ.ಪ್ರ.ಬ. ವಾರ್ಡ್ 183 | R Anitha |
| 2. | ದಿಲೀಪ್ ಕುಮಾರ್. ಬಿ.ಪಿ | AE (BWSSB) Sub-mains | [signature] |
| 3. | ರಾಜಶೇಖರ.ಸಿ.ಆರ್ | AE BESCOM | [signature] |
| 4. | Keerthi A | JE, S9 BESCOM | [signature] |
| 5. | MURTHY. B | ಎಇ (BWSSB) | [signature] |
| 6. | K. Venkatesh. | TI (ARO BNP) | [signature] |
| 7. | ಲಕ್ಷ್ಮಣ | ತೋಟಗಾರ ಮೇಸ್ತ್ರಿ | ಲಕ್ಷ್ಮಣ |
| 8. | Shivashankar | AE S18 BESCOM | [signature] |
| 9. | | | |
| 10. | | | |
| 11. | | | |
| 12. | | | |
| 13. | | | |
| 14. | | | |
| 15. | | | |
| 16. | | | |

Scanned by CamScanner

## ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಾರ್ವಜನಿಕರು :-

| ಕ್ರಮ ಸಂಖ್ಯೆ | ಹೆಸರು | ಸಹಿ |
|---|---|---|
| 1. | P. HARI | [signature] 5/4/21 |
| 2. | ವಿ. ವೆಂಕಟೇಶ್ವರ | ವಿ. ವೆಂಕಟೇಶ್ವರ |
| 3. | K. SRINIVASA REDDY. | [signature] |
| 4. | P. [signature] | [signature] |
| 5. | | |
| 6. | | |
| 7. | | |
| 8. | | |
| 9. | | |
| 10. | | |
| 11. | | |
| 12. | | |
| 13. | | |
| 14. | | |
| 15. | | |
| 16. | | |
| 17. | | |
| 18. | | |
| 19. | | |
| 20. | | |

Scanned by CamScanner